

ಕಡಲಿನ ಏರಿಳಿತಗಳ ಲೆಕ್ಕಾಚಾರ ಹವಾಮಾನ ಇಲಾಖೆಯ ಮುಖ್ಯ ಕೆಲಸಗಳಲ್ಲೊಂದು. ವಾಯುಭಾರ ಕುಸಿತ ಎಲ್ಲಿ ಯಾವಾಗ ಸಂಭವಿಸುತ್ತದೆ ಎನ್ನುವ 'ಐಎಂಡಿ' ಲೆಕ್ಕಾಚಾರದಿಂದಾಗಿ ಸರ್ಕಾರ ಮುನ್ನೆಚ್ಚರಿಕೆ ಕ್ರಮಗಳನ್ನು ಕೈಗೊಳ್ಳುತ್ತದೆ. ಇದರಿಂದ ಸಾವು–ನೋವು ಹಾಗೂ ಆಸ್ತಿ ನಷ್ಟವನ್ನು ಗಣನೀಯ ಪ್ರಮಾಣದಲ್ಲಿ ತಡೆಯಲಾಗುತ್ತದೆ.

ಬ್ರಿಟಿಷ್ ಈಸ್ಟ್ ಇಂಡಿಯಾ ಕಂಪೆನಿಯು ಇಂತಹ ಹಲವು ವೀಕ್ಷಣಾಲಯಗಳನ್ನು ಭಾರತದಲ್ಲಿ ಸ್ಥಾಪಿಸಿತು. ವೀಕ್ಷಣಾಲಯಗಳ ಸಂಖ್ಯೆ ಹೆಚ್ಚಿದರೂ ಅಲ್ಲಿ ಲಭ್ಯವಾಗುವ ದತ್ತಾಂಶಗಳನ್ನು ಒಂದೆಡೆ ಕಲೆಹಾಕುವ ಜಾಲವೊಂದು ರೂಪುಗೊಂಡಿರಲಿಲ್ಲ.

1875ರಲ್ಲಿ ಬಂಗಾಳದಲ್ಲಿ 'ಏಷ್ಯಾಟಿಕ್ ಸೊಸೈಟಿ'ಯ ವಿಜ್ಞಾನಿಗಳು ರಾಷ್ಟ್ರೀಯ ಹವಾಮಾನ ಸಮಿತಿಯನ್ನು ರಚಿಸುವ ವೈಜ್ಞಾನಿಕ ಕ್ರಾಂತಿಗೆ ಸಿದ್ಧತೆ ನಡೆಸಿದ್ದರು. ಮಳೆ, ಚಂಡಮಾರುತ, ಪ್ರವಾಹಕ್ಕೆ ಸಂಬಂಧಿಸಿದ ಮಾಹಿತಿಯನ್ನು ಒಂದೇ ವೇದಿಕೆಯಡಿ ತಂದು ವಿಕೋಪ ನಿರ್ವಹಣೆಯನ್ನು ಸಮರ್ಥವಾಗಿ ನಿರ್ವಹಿಸಲು ತಯಾರಿ ಮಾಡುವುದು ಹಾಗೂ ಭಾರತದಲ್ಲಿ ರೋಗಗಳು ಮತ್ತು ಹವಾಮಾನದ ನಡುವೆ ಸಂಬಂಧವಿದೆಯೇ ಎಂದು ಪತ್ತೆ ಮಾಡುವುದು ವಿಜ್ಞಾನಿಗಳ ಉದ್ದೇಶವಾಗಿತ್ತು. ಅದೇ ಸಂದರ್ಭದಲ್ಲಿ ಮಳೆಯ ಲೆಕ್ಕಾಚಾರಕ್ಕೆ ಸಂಬಂಧಿಸಿದಂತೆ ನಡೆಯುತ್ತಿದ್ದ ಸಂಶೋಧನೆಗಳನ್ನು ಗುರುತಿಸಿದ ಬ್ರಿಟಿಷ್ ಅಧಿಕಾರಿಗಳು, ಅದಾಗಲೇ ಭಾರತದ ವಿವಿಧ ಪ್ರಾಂತ್ಯಗಳಲ್ಲಿ ಬಿಡಿಬಿಡಿಯಾಗಿ ಕಾರ್ಯನಿರ್ವಹಿಸುತ್ತಿದ್ದ ಸುಮಾರು 80 ಹವಾಮಾನ ವ್ಯವಸ್ಥೆಗಳನ್ನು ಒಂದು ಸಂಸ್ಥೆಯ

## ಸಾಹಿತ್ಯದಲ್ಲಿ ಮಳೆ ಪ್ರೀತಿ

ಹವಾಮಾನ ಎಂದೊಡನೆ ತಕ್ಷಣ ನೆನಪಾಗುವುದು ಮಳೆಗಾಲ. ಮಳೆ ಜನಜೀವನದ ಆಸರೆ ಎಂದು ಭಾವಿಸಿದ ಜನಪದ ನಮ್ಮದು. ಕವಿಗಳಿಗೆ ಮಳೆಯು ಸ್ಫೂರ್ತಿ. ಮೋಡ ಕಟ್ಟುವ ವಿಧಾನಗಳನ್ನು ಪುರಾತನ ಕಾವ್ಯಗಳು, ಸಂಸ್ಕೃತ ಶ್ಲೋಕಗಳು, ಉಪನಿಷತ್ತುಗಳು ಬಣ್ಣಿಸಿವೆ. ಭಾರತದ ಪ್ರಸಿದ್ಧ ಕವಿಗಳೆಲ್ಲರೂ ಮಳೆಯಿಂದ ಪ್ರಭಾವಿತರಾದವರೇ. ಬಿಸಿಲು ಮತ್ತು ಮಳೆಯು ಭಾರತವನ್ನು ಸಮಾನವಾಗಿ ಪ್ರಭಾವಿಸಿದ್ದರೂ, ಸಾಹಿತ್ಯ ಕ್ಷೇತ್ರದಲ್ಲಿ ಮಳೆಯೇ ಅಧಿಪತ್ಯ ಸಾಧಿಸಿದೆ.

ಭಾರತದ ಶ್ರೇಷ್ಠ ಕವಿಗಳಲ್ಲಿ ಒಬ್ಬರಾದ ರವೀಂದ್ರನಾಥ ಟ್ಯಾಗೋರರು 'ಮಳೆಕವಿ'ಯೆಂದೂ ಪ್ರಸಿದ್ಧರು. ಮಳೆಯೆಂದರೆ ಮೈಮರೆತು ನೋಡುತ್ತಿದ್ದ ಅವರು ಕೋಲ್ಕತ್ತದ ಅಲಿಪೋರ್ ಎಂಬಲ್ಲಿ ಇರುವ ಬೃಹತ್ ಆಲದ ಮರದಡಿಯಲ್ಲಿ ನಿಂತು ಆಕಾಶದ ವಿದ್ಯಮಾನಗಳನ್ನು ನೋಡುತ್ತ ಹೊತ್ತು ಕಳೆಯುತ್ತಿದ್ದರು. ಅಲ್ಲಿಯೇ ಇದ್ದ ಹವಾಮಾನ ವೀಕ್ಷಣಾಲಯಕ್ಕೂ ರವೀಂದ್ರನಾಥ ಟ್ಯಾಗೋರರು ಆಗಾಗ ಬರುತ್ತಿದ್ದರಂತೆ. ಮಳೆಯನ್ನು ಪ್ರೀತಿಸುವ ಅವರಿಗೆ ಮಳೆಯ ಲೆಕ್ಕಾಚಾರವನ್ನು ಹಾಕುವ ವೀಕ್ಷಣಾಲಯದ ಬಗ್ಗೆ ಬಹಳ ಕುತೂಹಲ. ಅದೇ ವೀಕ್ಷಣಾಲಯದಲ್ಲಿ ಕಾರ್ಯನಿರ್ವಹಿಸುತ್ತಿದ್ದವರು ಪ್ರಸಿದ್ಧ ಸಂಖ್ಯಾಶಾಸ್ತ್ರಜ್ಞ ಪ್ರಶಾಂತ ಚಂದ್ರ ಮಹಲನೊಬಿಸ್. ಅವರು ಸಂಖ್ಯಾಶಾಸ್ತ್ರಜ್ಞರಾಗಿ ಪ್ರಸಿದ್ಧರಾಗುವುದಕ್ಕೆ ಮುನ್ನ, ಅಂದರೆ 1923ರಿಂದ 1926ರವರೆಗೆ ಈ ಹವಾಮಾನ ವೀಕ್ಷಣಾಲಯದಲ್ಲಿ ಮಳೆಯ ಅಂದಾಜು ಮಾಡುವ ಕಾಯಕದಲ್ಲಿ ತೊಡಗಿದ್ದರು. ಆ ಸಂದರ್ಭದಲ್ಲಿ ಮಹಲನೊಬಿಸ್ ಅವರ ಮನೆಗೆ ಟ್ಯಾಗೋರರು ಅತಿಥಿಯಾಗಿ ಬರುತ್ತಿದ್ದರು.

ವೈಶಾಖವು ಮುಗಿಯುತ್ತಿದ್ದಂತೆಯೇ ಮಳೆಗಾಗಿ ಕಾಯುತ್ತಾ 'ಈ ವರ್ಷ ಮಳೆ ಯಾವಾಗ ಆರಂಭವಾಗಲಿದೆ?' ಎಂದು ಸುಖಾಸುಮ್ಮನೇ ಮಹಲನೊಬಿಸ್ ಅವರನ್ನು ಟ್ಯಾಗೋರರು ಒಮ್ಮೆ ಪ್ರಶ್ನಿಸಿದರಂತೆ. ಮಹಲನೊಬಿಸ್ ಅಂತೂ ಲೆಕ್ಕಾಚಾರದಲ್ಲಿ ಬಹಳ ಪಕ್ಕಾ ಮನುಷ್ಯ. ಜೂನ್ ತಿಂಗಳಲ್ಲಿ ಯಾವ ದಿನಾಂಕದಂದು ಮಳೆ ಬರುತ್ತದೆ ಎಂದು ಅವರು ಹೇಳುತ್ತಿದ್ದರೋ, ಅದೇ ದಿನಾಂಕಕ್ಕೇ ಮಳೆ ತಪ್ಪದೇ ಬರುವುದನ್ನು ಕಂಡ ಟ್ಯಾಗೋರರು ಈ ಲೆಕ್ಕಾಚಾರದ ಮಹತ್ವದ ಬಗ್ಗೆ ಕುತೂಹಲ ತಾಳಿದ್ದರು.

ಮಹಲನೊಬಿಸ್ ಅವರಿಗೆ ಸಂಖ್ಯಾಶಾಸ್ತ್ರದಲ್ಲಿ ಮುಂದುವರೆಯುವಂತೆ ಒತ್ತಾಯಿಸಿದವರು ಕೂಡ ಟ್ಯಾಗೋರರೇ ಆಗಿದ್ದರು. ಟ್ಯಾಗೋರರ ಪ್ರೇರಣೆಯಿಂದಲೇ ಮಹಲನೊಬಿಸ್ ಕೋಲ್ಕತ್ತದಲ್ಲಿ 'ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಸ್ಟಾಟಿಸ್ಟಿಕ್ಸ್' ಸಂಸ್ಥೆಯನ್ನು 1931ರಲ್ಲಿ ಸ್ಥಾಪಿಸಿದರು. ಅವರು ಹವಾಮಾನ ವೀಕ್ಷಣೆಯ ಕ್ಷೇತ್ರವನ್ನು ಬಿಟ್ಟು ಹೋಗಿದ್ದು, ಈ ಕ್ಷೇತ್ರಕ್ಕೆ ಆದ ನಷ್ಟವೆಂದೇ ಭಾವಿಸಲಾಗುತ್ತಿದೆ. ಅಂದಹಾಗೆ, ಟ್ಯಾಗೋರರನ್ನು ಪ್ರಭಾವಿಸಿದ ಆಲದ ಮರ ಇಂದಿಗೂ ಅಲಿಪೋರ್‌ನಲ್ಲಿ ಇದೆ.